# 24x7 ರ ಸಮಾಜದಲ್ಲಿ ಜೀವಿಸುವುದು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಆ.ಕಾಂಡ 2:1–3, ಯೆರೆ 45:1–5, ವಿ.ಕಾಂಡ 20:11, 2 ಸಮುವೇಲ 7:12, ಮಾರ್ಕ 6:30–32, ಆ.ಕಾಂಡ 4:1–17.

**ಸ್ಮರಣವಾಕ್ಯ : "ಯಹೋವನ ಆಲಯದ ಅಂಗಳಗಳಲ್ಲಿ "ಸೇರಬೇಕೆಂದು ನನ್ನ ಆತ್ಮವು ಹಂಬಲಿಸುತ್ತಾ ಕುಂದಿಹೋಗಿತ್ತು. ಆದರೆ ಈಗ ಚೈತನ್ಯ ಸ್ವರೂಪನಾದ ದೇವರಿಗೆ ನನ್ನ ತನು ಮನಗಳಿಂದ ಹರ್ಷಧ್ವನಿ ಮಾಡುತ್ತೇನೆ"** (ಕೀರ್ತ 84:2).

ಗೋಡೆಯ ಮೇಲೆ ನೇತು ಹಾಕಿದ್ದ ಗಡಿಯಾರವು ಟಿಕ್‌ಟಾಕ್, ಟಿಕ್‌ಟಾಕ್, ಟಿಕ್‌ಟಾಕ್ ಎಂದು ಒಂದೇ ಸಮನೆ ನಿಷ್ಕರುಣೆಯಿಂದ ಬಡಿಯುತ್ತಾ ಇದೆ. ಸಬ್ಬತ್ತು ಆರಂಭವಾಗುವುದಕ್ಕೆ ಕೇವಲ ಎರಡು ಗಂಟೆಗಳು ಮಾತ್ರ ಉಳಿದಿವೆ. ಮೇರಿಯು ತನ್ನ ಚಿಕ್ಕದಾದ ಮನೆಯೊಳಗೆ ಇದ್ದ ಅವಸ್ಥೆಯನ್ನು ನೋಡಿ ನಿಟ್ಟುಸಿರು ಬಿಟ್ಟಳು. ಮುಂದಿನ ಕೋಣೆಯಲ್ಲಿ ಮಕ್ಕಳ ಆಟಿಕೆಗಳು ಅಲ್ಲಲ್ಲಿ ಇನ್ನೂ ಹಾಗೆಯೇ ಬಿದ್ದುಕೊಂಡಿವೆ; ಅಡುಗೆಮನೆಯು ಅಸ್ತವ್ಯಸ್ತವಾಗಿದೆ; ಅವಳ ಚಿಕ್ಕಮಗಳಾದ ಸಾರಳು ಜ್ವರದಿಂದ ಹಾಸಿಗೆಯ ಮೇಲೆ ಮಲಗಿದ್ದಾಳೆ; ನಾಳೆ ದೇವಾಲಯದಲ್ಲಿ (ಸಭೆಯಲ್ಲಿ) ಮೇರಿಯು ಆರಾಧನೆಯ ಆರಂಭಕ್ಕೆ ಸಭಿಕರಿಗೆ ಸ್ವಾಗತ ಕೋರಲು ಒಪ್ಪಿಕೊಂಡಿದ್ದಾಳೆ. ಆದ್ದರಿಂದ ಆರಂಭಕ್ಕೆ ಮೂವತ್ತು ನಿಮಿಷಗಳಾದರೂ ಮೊದಲೆ ಮನೆಯನ್ನು ಬಿಡಬೇಕಾಗುತ್ತದೆ. ನಾಳೆ ನನಗೆ ಬಿಡುವು ಸಿಕ್ಕರೆ ಸಾಕು ಎಂಬುದಾಗಿ ಮೇರಿಯು ಆಸೆಯಿಂದ ಹಲುಬಿದಳು.

---

* ಈ ವಾರದ ಪಾಠವನ್ನು ಜುಲೈ 3ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

ಅದೇ ಸಮಯದಲ್ಲಿ ಆಕೆಯ ಯಜಮಾನ ಪಟ್ಟಣದ ಮತ್ತೊಂದು ಕಡೆ ದಿನಸಿ ಅಂಗಡಿ ಮುಂದೆ ಸರತಿ ಸಾಲಿನಲ್ಲಿ ನಿಂತಿದ್ದಾನೆ. ರಸ್ತೆಯ ವಾಹನ ಸಂಚಾರದ ದಟ್ಟಣೆಯು ದುಃಸ್ವಪ್ನಕಾರಿಯಾಗಿದೆ. ಸರತಿಯ ಸಾಲು ಉದ್ಧವಾಗಿದೆ. ಪ್ರತಿಯೊಬ್ಬರೂ ಒಂದೇ ಸಮಯದಲ್ಲಿ ಒಟ್ಟಿಗೆ ಕೊಂಡುಕೊಳ್ಳಲು ತೊಡಗಿದ್ದಾರೇನೋ ಎಂಬಂತೆ ಆತನಿಗೆ ಭಾಸವಾಗುತ್ತಿದೆ.

ಅಯ್ಯೋ, ಹಿಂಗಾದ್ರೆ ನನ್ನ ಕೈಯಲ್ಲಿ ಆಗುವುದಿಲ್ಲ ಸ್ವಲ್ಪ ರೆಸ್ಟ್ ಸಿಕ್ಕಿದ್ರೆ ಸಾಕಪ್ಪ ಅಂತ ಜೋಶನು ಒಳಗೊಳಗೇ ಹಲುಬಿದನು. ನಮ್ಮ ಜೀವನಕ್ಕೆ ಹೆಚ್ಚಿನದೊಂದು ಬೇಕಾಗಿದೆ. ನಮ್ಮ ಜೀವನವನ್ನು ಗಡಿಬಿಡಿಯಿಂದ ತುಂಬಿದ ತಾಸುಗಳು ನಿಯಂತ್ರಿಸುತ್ತಿವೆ, ದುಡಿವ ಸಮಯ, ವೈದ್ಯರ ಸಲಹೆ ಪಡೆಯಲು ಗೊತ್ತುಪಡಿಸಿಕೊಂಡ ಸಮಯ, ಒಬ್ಬರಿಗೊಬ್ಬರು ಮಾತಾಡುವ ಸಮಯ, ಖರೀದಿ ಮಾಡುವ ಸಮಯ, ಸ್ಕೂಲಿನಲ್ಲಿ ನಡೆಯುವ ಸಮಾರಂಭದ ಸಮಯ ಹೀಗೆ ಯಾವುದಾದರೊಂದು ನಾವು ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣ ಮಾಡುತ್ತಿರಬಹುದು ಇಲ್ಲವೇ ಸ್ವಂತ ಸ್ಕೂಟರ್‌ನಲ್ಲಿ ಓಡಾಡುತ್ತಿರಬಹುದು ಅಥವಾ ಮಿನಿವ್ಯಾನಿನಲ್ಲಿ ಓಡಾಡಿಕೊಂಡಿರ-ಬಹುದು ನಮ್ಮ ಸುತ್ತಲೂ ಇರುವ ಪ್ರಪಂಚದ ಜೊತೆ ಒಂದಲ್ಲ ಒಂದು ಕೆಲಸದಲ್ಲಿ ನಿರಂತರವಾಗಿ ತೊಡಗಿಕೊಂಡಿರುವುದರಿಂದ ಅದು ನಮಗೆ ನಿಜವಾಗಿಯೂ ಮುಖ್ಯವಾಗಿರುವುದನ್ನು ಮರೆಸಿಬಿಡುವ ಅಪಾಯವನ್ನು ಒಡ್ಡುತ್ತಿದೆ.

ಇಂತಹ ಗಡಿಬಿಡಿಯ ಮಧ್ಯದಲ್ಲಿ ನಾವು ವಿಶ್ರಾಂತಿಯನ್ನು ಹೊಂದಿ-ಕೊಳ್ಳುವುದಾದರೂ ಹೇಗೆ?

**ಭಾನುವಾರ** **ಜೂನ್ 27**

## ಬಳಲಿ ಬಾಡುವುದು

ಓದಿರಿ: ಆದಿಕಾಂಡ 2:1–3 ಮನುಷ್ಯರು ದುಡಿದು ಆಯಾಸಗೊಳ್ಳುವ ಮೊದಲೇ ದೇವರು ವಿಶ್ರಾಂತಿ ಪಡೆದುಕೊಳ್ಳುವ ದಿನವನ್ನು ಸೃಷ್ಟಿಸಿದನು ಏಕೆ?

ಮನುಷ್ಯರು ತಮ್ಮ ಜೀವನವನ್ನು ತಾವು ಇಷ್ಟೊಂದು ಒತ್ತಡಭರಿತವಾಗಿ ಮಾಡಿಕೊಳ್ಳುವ ಮೊದಲೇ ಅವರಿಗೆ ಸಬ್ಬತ್ತೆಂಬ ಒಂದು ಗುರುತನ್ನು ಸ್ಥಾಪಿಸಿದನು ಅದು ಅವರ ನೆನಪನ್ನು ಎಚ್ಚರಿಸುವ ಜೀವನ ಶೈಲಿಯಾಗಿತ್ತು. ಈ ದಿನವು

(ಸಬ್ಬತ್ತಿನ ದಿನ) ತಮ್ಮೆಲ್ಲಾ ಕೆಲಸಗಳನ್ನು ನಿಲ್ಲಿಸಿ ಸಂತೋಷಪಡುವ ಒಂದು ಸಮಯವಾಗಿತ್ತು. ಇದು ಏನನ್ನೂ ಮಾಡದ ದಿನವಾಗಿದ್ದು, ವಿಶೇಷವಾಗಿ ಸಸ್ಯ, ಪ್ರಾಣಪಕ್ಷಿಗಳು, ಗಾಳಿ ನೀರು, ಜನರು ಮತ್ತು ಅವರಿಗೆ ಸೃಷ್ಟಿ ಕರ್ತನು ಕೊಟ್ಟಿರುವ ಎಲ್ಲಾ ಉಡುಗೊರೆಗಳನ್ನು ಅನುಭವಿಸಿಕೊಂಡು ಆಚರಣೆ ಮಾಡುವುದಕ್ಕಾಗಿ ಕೊಟ್ಟಿದ್ದನು. ಇದು ಏದೇನ್ ತೋಟದಿಂದ ಹೊರಬೀಳುವಾಗ ಮುಗಿದು ಹೋಗುವಂತಹ ಒಂದು ಸಲದ ಆಚರಣೆಯಾಗಿರಲಿಲ್ಲ. ದೇವರು ದೇವರು ಸಬ್ಬತ್ತಿನ ವಿಶ್ರಾಂತಿಯು ಕಾಲವನ್ನು ಮೀರಿ ನಿಲ್ಲುವ ಆಮಂತ್ರಣವನ್ನಾಗಿ ಖಾತ್ರಿಪಡಿಸಲು ಅದನ್ನು ಕಾಲವೆಂಬ ವಸ್ತ್ರದ ಜೊತೆಗೆ ಆರಂಭದಲ್ಲಿಯೇ ನೇಯ್ದನು. ಸೃಷ್ಟಿಯ ಉತ್ಸವವನ್ನು ವಿಶ್ರಾಂತಿಯೊಡನೆ ಆಚರಿಸಲು ಪ್ರತಿವಾರದ ಏಳನೆಯ ದಿನಕ್ಕೆ ಯಾವಾಗಲೂ ಪುನಃ ಪುನಃ ಆಮಂತ್ರಣವಿರುತ್ತದೆ.

ಈವಾಗ ಮನುಷ್ಯರು ಯಂತ್ರಗಳಿಂದ ಕೆಲಸ ಮಾಡಿಸುವುದರಿಂದ ಇನ್ನೂರು ವರುಷಗಳ ಹಿಂದೆ ಜನರು ದೈಹಿಕವಾಗಿ ಪಡುತ್ತಿದ್ದ ಪರಿಶ್ರಮವನ್ನು ಇಂದು ಪಡಬೇಕಾಗಿಲ್ಲವೆಂದು ಒಬ್ಬರು ಹೇಳಬಹುದು. ಆದರೆ ಇಂದಿಗೂ ಸಹ ವಿಶ್ರಾಂತಿಯು ಕಡಿಮೆ ಪ್ರಮಾಣದಲ್ಲಿಯೇ ಸಿಗುವಂತೆ ತೋರುತ್ತದೆ. ನಾವು ನಮ್ಮ ಕೆಲಸಗಳನ್ನು ಮಾಡದಿರುವ ಸಂದರ್ಭಗಳಲ್ಲಿ ಸುಮ್ಮನಿರದೆ ಭಾವೋನ್ಮತ್ತ ಚಟುವಟಿಕೆಗಳಲ್ಲಿ ಸಮಯವನ್ನು ಕಳೆಯುತ್ತೇವೆ. ನಾವು ಹೆಚ್ಚು ಕೆಲಸಗಳನ್ನು ನಿಭಾಯಿಸಲು ಪ್ರಯತ್ನ ಪಟ್ಟಾಗ್ಯೂ ಹೇಗೋ ಏನೋ ಹಿಂದೆ ಉಳಿದುಕೊಂಡು ಬಿಡುತ್ತೇವೆ, ಹಾಗಾಗಿ ಮಾಡಬೇಕಾದ ಕೆಲಸಗಳು ಯಾವಾಗಲೂ ಇದ್ದೇ ಇರುತ್ತವೆ.

ನಾವು ಈವಾಗ ಕಡಿಮೆ ನಿದ್ದೆ ಮಾಡುತ್ತೇವೆ ಎಂಬುದನ್ನು ಸಂಶೋಧನೆಗಳು ತೋರಿಸುತ್ತವೆ, ಅನೇಕ ಜನರು ನಿದ್ರೆ ತಡೆಯಲು ಕೆಫಿನ್ (ಕಾಫಿ) ಸೇವಿಸುತ್ತಾರೆ. ನಮಗೆ ತ್ವರಿತವಾಗಿ ಕೆಲಸ ಮಾಡುವ ಸೆಲ್‌ಫೋನ್‌ಗಳು, ಗಣಕಯಂತ್ರಗಳು, ಅಂತರ್ಜಾಲ ಸಂಪರ್ಕಗಳು ಇದ್ದಾಗ್ಯೂ ನಮಗೆ ಸಾಕಷ್ಟು ಸಮಯವಿರುವಂತೆ ಅನ್ನಿಸುವುದೇ ಇಲ್ಲ.

ನಾವು ವಿಶ್ರಾಂತಿ ಪಡೆದುಕೊಳ್ಳುವುದರ ಪ್ರಾಮುಖ್ಯತೆಯ ಬಗ್ಗೆ ಸತ್ಯವೇದದ ಈ ವಾಕ್ಯಗಳು ನಮಗೆ ಏನನ್ನು ಹೇಳುತ್ತವೆ?

(ಮಾರ್ಕ 6:31, ಕೀರ್ತ 4:8, ವಿ.ಕಾಂಡ 23:12, ಧ.ಕಾಂಡ 5:14 ಮತ್ತು ಮತ್ತಾಯ 11:28).

ನಮ್ಮನ್ನು ಸೃಷ್ಟಿ ಮಾಡಿದ ದೇವರಿಗೆ ನಮಗೆ ಶಾರೀರಿಕ ವಿಶ್ರಾಂತಿ ಅಗತ್ಯವಿದೆ ಎಂಬುದು ಗೊತ್ತಿತ್ತು ಎಂತಲೇ ಆತನು, ನಾವು ಶಾರೀರಿಕ ವಿಶ್ರಾಂತಿ ಹೊಂದಿಕೊಳ್ಳುವಂತೆ ಕಾಲಚಕ್ರವನ್ನು ರಾತ್ರಿಯಿಂದಲೂ ಸಬ್ಬತ್ತಿನಿಂದಲೂ ಕಟ್ಟಿದ್ದನು. ಯೇಸುಕ್ರಿಸ್ತನು ನಮ್ಮ ಜೀವಿತದ ಒಡೆಯನಾಗಿದ್ದಾನೆ ಎಂದು ಒಪ್ಪಿಕೊಳ್ಳುವುದು ನಾವು ವಿಶ್ರಾಂತಿಪಡೆದುಕೊಳ್ಳುವುದಕ್ಕೆ ಸಮಯವನ್ನು ಸೌರಿಸಿಕೊಳ್ಳುವ ಗಂಭೀರವಾದ ಜವಾಬ್ದಾರಿಯನ್ನೂ ಸಹಾ ಒಳಗೊಂಡಿದೆ. ಖಂಡಿತವಾಗಿಯೂ ಸಬ್ಬತ್ತಿನ ಆಜ್ಞೆಯು ಕೇವಲ ಒಂದು ಸಲಹೆಯಲ್ಲ ಸೂಚನೆಯಲ್ಲ. ಆದರೆ ಇದು ಒಂದು ಕಟ್ಟಳೆಯಾಗಿದೆ!

ನಿಮ್ಮ ಪಾಡುಪಡುವ ಜೀವನದ ಬಗ್ಗೆ ಏನು ಹೇಳುವಿರಿ? ನಾವು ಮಾನಸಿಕವಾಗಿ ಮತ್ತು ಶಾರೀರಿಕವಾಗಿ ವಿಶ್ರಾಂತಿಯನ್ನು ಹೊಂದಿಕೊಳ್ಳಬೇಕೆಂದು ದೇವರ ಚಿತ್ತವಾಗಿದೆ. ನೀವು ಅದರ ಉತ್ತಮವಾದ ಅನುಭವ ಹೊಂದಲು ಏನು ಮಾಡಬಲ್ಲಿರಿ?

**ಸೋಮವಾರ** **ಜೂನ್ 28**

## ಕಷ್ಟದಲ್ಲಿ ದಣಿದು ಹೋಗುವುದು

ಮಿತಿಮೀರಿದ ದೈಹಿಕ ಪ್ರಯಾಸದಿಂದ ನಿದ್ರೆಗೆಡುತ್ತೇವೆ ಮತ್ತು ಆಯಾಸಗೊಳ್ಳುತ್ತೇವೆ. ಇವು ತಾನೆ ನಮಗೆ ನಿಜವಾದ ಸಮಸ್ಯೆಗಳು. ಇದಕ್ಕಿಂತಲೂ ಹೆಚ್ಚಿನ ತೊಂದರೆಗಳು ನಾವು ಭಾವನಾತ್ಮಕವಾಗಿ ಬರಿದಾಗಿ ಬಿಟ್ಟಾಗ ಉಂಟಾಗುತ್ತವೆ. ಹಾಗಾಗಿ, ನಮ್ಮ ಭಾವನಾತ್ಮಕ ಸಮಸ್ಯೆಗಳೊಂದಿಗೆ ನಿದ್ರೆಗೆಡುವುದು ಸೇರಿಕೊಂಡಾಗ ನಾವು ನೊಂದುಕೊಳ್ಳುವಷ್ಟು ಅಧೈರ್ಯಪಟ್ಟುಕೊಳ್ಳುತ್ತೇವೆ.

ಬ್ಯಾಬಿಲೋನಿಯನ್ನರು ಯೆರೂಸಲೇಮ್ ಪಟ್ಟಣಕ್ಕೆ ಮುತ್ತಿಗೆ ಹಾಕಿ ಅದನ್ನು ನಾಶ ಮಾಡುವ ಮೊದಲು ಉಂಟಾದ ಅಸ್ತವ್ಯಸ್ತಕ್ಕೆ ನರಳಾಟ ಇವುಗಳಿಂದ ಲೇಖಕನಾದ ಬಾರೂಕನು ಸಹಾ ಅಧೈರ್ಯ ಪಟ್ಟುಕೊಂಡಿರುತ್ತಾನೆ.

ಯೆರೆಮೀಯ 45:1–5ನ್ನು ಓದಿರಿ. ಬಾರೂಕನಿಗೆ ಭಾವನಾತ್ಮಕವಾಗಿ ಯಾವ ಆರೋಗ್ಯ ಸಮಸ್ಯೆಯಿತ್ತು ಬರೆಯಿರಿ.

ದೇವರು ನಿಮಗೆ ಮಾತ್ರ ಅನ್ವಯವಾಗುವ ವೈಯಕ್ತಿಕವಾದ ಸಂದೇಶವನ್ನು ಕಳುಹಿಸುವಾಗ ನೀವು ಹೇಗೆ ಭಾವಿಸಿಕೊಳ್ಳುವಿರಿ ಎಂದು ಊಹೆ ಮಾಡಿಕೊಳ್ಳುವಿರಾ? ಬಾರೂಕನು ದೇವರಿಂದ ನೇರವಾಗಿ ಸಂದೇಶವನ್ನು ಹೊಂದಿಕೊಂಡನು (ಯೆರೆ 45:2). ಇದು ಸುಮಾರು ಕ್ರಿ.ಪೂ. 605 ರಿಂದ ಕ್ರಿ.ಪೂ. 604ರಲ್ಲಿ ಯೆಹೋಯಾಕೀಮನು ಯಹೂದ ಅರಸನಾಗಿದ್ದ ನಾಲ್ಕನೇ ವರುಷದಲ್ಲಿ ನಡೆಯಿತು ಎಂಬುದಾಗಿ ನಮಗೆ ತಿಳಿಸಲ್ಪಟ್ಟಿದೆ. ಯೆರೆಮೀಯ 45:3ನೇ ವಚನವು ಜನರು ದಣಿದು ದುಃಖಪಡುವುದು ಅವರ ಭಾವನೆಗಳನ್ನು ಸಾರಾಂಶರೂಪವಾಗಿ ಪ್ರತಿಬಿಂಬಿಸುತ್ತದೆ.

ಇವುಗಳಿಂದ ನಾವು ಬಾರೂಕನು ಮಾಡಿದ ದೂರು ಕೇವಲ ತೋರಿಕೆಯ ನರಳಾಟವಲ್ಲವೆಂದು ವಾಕ್ಯವು ನಮಗೆ ತಿಳಿಸುತ್ತದೆ. ಆತನು ಭಾವನಾತ್ಮಕವಾಗಿ ಕುಸಿದು ಹೋಗಿ ಅಧೈರ್ಯಪಟ್ಟುಕೊಳ್ಳುವುದಕ್ಕೆ ಒಂದು ಸಕಾರಣವಿತ್ತು. ಬಹಳಷ್ಟು ಕೆಟ್ಟ ಕಾರ್ಯಗಳು ನಡೆಯುತ್ತಿದ್ದವು ಮತ್ತು ಕೆಟ್ಟಕಾರ್ಯಗಳು ಇನ್ನೂ ಹೆಚ್ಚಾಗಿ ಬರುವುದಕ್ಕಿದ್ದವು.

ದೇವರು ಬಾರೂಕನ ದುಃಖಕ್ಕೆ ಮತ್ತು ನೋವಿಗೆ ಹೇಗೆ ಉತ್ತರಿಸಿದನು? ಯೆರೆಮೀಯ 45:4,5ನ್ನು ಓದಿರಿ.

ದೇವರು ಬಾರೂಕನಿಗೆ ಕೊಟ್ಟ ಉತ್ತರವನ್ನು ಗಮನಿಸಿದಾಗ ದೇವರಿಗಿದ್ದ ನಿರಾಶೆ ಮತ್ತು ನೋವು ಬಾರೂಕನಿಗಿದ್ದದುಕ್ಕಿಂತ ಬಹಳ ಬಹಳ ಹೆಚ್ಚಾಗಿತ್ತು ಎಂದು ತಿಳಿದು ಬರುತ್ತದೆ. ಆತನು ಯೆರೂಸಲೇಮನ್ನು ಕಟ್ಟಿದ್ದನು. ಈವಾಗ ಅದನ್ನು ಕೆಡವಿ ಹಾಕಲು ಉದ್ದೇಶಿಸಿದ್ದಾನೆ. ಆತನು ಇಸ್ರಾಯೇಲ್ಯಾನ್ನು ದ್ರಾಕ್ಷಿಯ ತೋಟದಂತೆ ನೆಟ್ಟು ಬೆಳೆಸಿದ್ದನು (ಯೆಶಾಯ 5:1–7). ಈವಾಗ ಅದನ್ನು ದೇವರು ಕಿತ್ತು ಹಾಕಿ ಗಡಿಪಾರು ಮಾಡಲು ಉದ್ದೇಶಿಸಿದ್ದಾನೆ. ಆತನು ಇಸ್ರಾಯೇಲ್ಯರಿಗೆ ಹೀಗೆ ಮಾಡುವುದು ಅವನ ಚಿತ್ತವಾಗಿರಲಿಲ್ಲ. ಆದರೆ ಅವರು ಆತನಿಗೆ ವಿರೋಧವಾಗಿ ಎದುರು ಬಿದ್ದಕಾರಣ ಹಾಗೆ ಮಾಡಲು ನಿಶ್ಚಯಿಸಿದನು. ಆದರೆ ಬಾರೂಕನಿಗೆ ಸುರಂಗದ ಮತ್ತೊಂದು ತುದಿಯಲ್ಲಿ ಬೆಳಕು ಹೊಳೆಯುತ್ತಿತ್ತು. ದೇವರು ಬಾರೂಕನ ಪ್ರಾಣವನ್ನು ನಾಶದಿಂದಲೂ ಗಡಿಪಾರಿನಿಂದಲೂ ಮತ್ತು ನಷ್ಟದಿಂದಲೂ ಸಂರಕ್ಷಿಸುವವನಾಗಿದ್ದನು.

ದೇವರು ಬಾರೂಕನಿಗೆ ಹೇಳಿದ ಮಾತುಗಳನ್ನು ಮತ್ತೊಮ್ಮೆ ಓದಿರಿ. ಅದರಿಂದ ನಾವು ನಮಗಾಗಿ ಯಾವ ಸಾಮಾನ್ಯವಾದ ಸಂದೇಶವನ್ನು ಹೊಂದಿಕೊಳ್ಳಬಹುದು? ಸನ್ನಿವೇಶವು ಹೇಗಿದ್ದರೂ ದೇವರು ಕಡೆಯದಾಗಿ ನಮಗೋಸ್ಕರ ಇದ್ದೇ ಇರುತ್ತಾನೆ ಎಂಬುದರ ಬಗ್ಗೆ ಈ ವಚನವು ಏನು ಹೇಳುತ್ತದೆ?

**ಮಂಗಳವಾರ ಜೂನ್ 29**

## ಹಳೆಯ ಒಡಂಬಡಿಕೆಯಲ್ಲಿ ವಿಶ್ರಾಂತಿಯನ್ನು ವ್ಯಾಖ್ಯಾನಿಸುವುದು

ಖಂಡಿತವಾಗಿ, ನಮಗೆಲ್ಲರಿಗೂ ವಿಶ್ರಾಂತಿಯು ಬೇಕೇಬೇಕು, ಇದರ ವಿಷಯವಾಗಿ ಸತ್ಯವೇದದ ವಚನಗಳು ಮಾತಾಡುತ್ತವೆ. ದೇವರು ನಮ್ಮನ್ನು ಚಟುವಟಿಕೆಯುಳ್ಳವರಾಗಿ ಸೃಷ್ಟಿಸಿದ್ದಾಗ್ಯೂ ಎಲ್ಲಾ ಚಟುವಟಿಕೆಗಳು ವಿರಾಮದ ನಿಯಮವನ್ನು ಹೊಂದಿರಬೇಕು.

ಇಬ್ರಿಯ ಭಾಷೆಯ ಹಳೆಯಒಡಂಬಡಿಕೆಯು ವಿಶ್ರಾಂತಿಯನ್ನು ಕುರಿತು ಅನೇಕ ಪದಗಳನ್ನು ಬಳಸಿದೆ. ದೇವರು ಹೊಸದಾಗಿ ಎಲ್ಲವನ್ನೂ ಸೃಷ್ಟಿಸಿದ ಬಳಿಕ ಏಳನೇ ದಿನದಲ್ಲಿ ವಿಶ್ರಾಂತಿಹೊಂದಿದ ವಿವರಣೆಯು (ಆ.ಕಾಂಡ 2:2,3). ಶಬ್ಬಾಟ್ ಎಂಬ ಕ್ರಿಯಪದವನ್ನು ಉಪಯೋಗಿಸಿದೆ. ಇದು ಸಬ್ಬತ್ತು ಎಂಬ ನಾಮಪದದ ಕ್ರಿಯಾರೂಪವಾಗಿದೆ. ಹಾಗೆಂದರೆ ಎಲ್ಲಾ ಕೆಲಸಗಳನ್ನು ನಿಲ್ಲಿಸು, ವಿಶ್ರಾಂತಿ ಹೊಂದು, ರಜೆ ತೆಗೆದುಕೋ ಎಂಬ ಅರ್ಥವನ್ನು ಸೂಚಿಸುತ್ತದೆ. ಅದೇ ಕ್ರಿಯಾಪದವನ್ನು ವಿ.ಕಾಂಡ 5:5 ಕರ್ಮಪದದ ರೂಪದಲ್ಲಿ ಉಪಯೋಗಿಸಿದೆ ಮತ್ತು ಇದನ್ನು ಒಬ್ಬನನ್ನು ವಿಶ್ರಾಂತಿ ಹೊಂದುವಂತೆ ಮಾಡುವುದು ಎಂಬುದಾಗಿ ಅನುವಾದಿಸಬಹುದು. ಕೋಪಗೊಂಡ ಫರೋಹನು ಇಸ್ರಾಯೇಲ್ಯರು ತಮ್ಮ ದುಡಿಮೆಯನ್ನು ನಿಲ್ಲಿಸಿ ವಿಶ್ರಾಂತಿ ಹೊಂದಿಕೊಳ್ಳುವ ವಿಷಯದಲ್ಲಿ ಮೋಶೆಯ ಮೇಲೆ ಆಪಾದನೆ ಮಾಡ್ದನು.

ನಾಲ್ಕನೆ ಆಜ್ಞೆಯಲ್ಲಿ ಉಲ್ಲೇಖಿತವಾಗಿರುವ ದೇವರ ವಿಶ್ರಾಂತಿಕ್ರಿಯೆ ಏಳನೇ ದಿನದ ಸಬ್ಬತ್ತು ಇಬ್ರಿಯಕ್ರಿಯಾಪದ ನಾಖ್ ಎಂಬ ಪದದಿಂದ ವ್ಯಕ್ತವಾಗಿದೆ (ವಿ.ಕಾಂಡ 20:11, ಧ.ಕಾಂಡ 5:14) ಯೋಬ 3:13ರಲ್ಲಿ ಈ ಕ್ರಿಯೆಪದವನ್ನು ವಿಶ್ರಾಂತಿ ಎಂಬುದಾಗಿ ಅನುವಾದಿಸಲಾಗಿದೆ.

ಅರಣ್ಯಕಕಾಂಡ 10:36 ಇದನ್ನು ಹೆಚ್ಚು ಅಲಂಕಾರಿಕವಾಗಿ ಮಂಜೂಷ ಪೆಟ್ಟಿಗೆಯಲ್ಲಿ ಇಡಲ್ಪಟ್ಟ ನಿಬಂಧನೆಯ ಶಾಸನವನ್ನು ಉಲ್ಲೇಖಿಸುತ್ತ ನೆಲೆಯೂರು

ಎಂಬ ಪದವನ್ನು ಉಪಯೋಗಿಸಲಾಗಿದೆ. 2 ಅರಸುಗಳ 2:15 ರಲ್ಲಿ ಎಲೀಯನ ಆತ್ಮವು ಎಲೀಷನ ಮೇಲೆ 'ನೆಲೆಗೊಂಡಿತು' ಎಂಬುದನ್ನು ಗಮನಿಸಬಹುದು.

ಮತ್ತೊಂದು ಮುಖ್ಯವಾದ ಕ್ರಿಯಾಪದ 'ಸಾಖತ್' ಎಂಬುದು ಹಾಗೆಂದರೆ ವಿಶ್ರಾಂತಿ, ಉಪಶಮನವನ್ನು ಕೊಡು, ಪ್ರಶಾಂತವಾಗಿರು ಎಂಬ ಅರ್ಥಗಳನ್ನು ಕೊಡುತ್ತದೆ. ಈ ಪದವು ಯೆಹೋಶುವನು ದಿಗ್ವಿಜಯ ಹೊಂದಿ ಆತನು ವಶಪಡಿಸಿಕೊಂಡ ಪ್ರಾಂತ್ಯವು ವಿಶ್ರಾಂತಿ ಹೊಂದಿದನ್ನು ವರ್ಣಿಸುತ್ತದೆ (ಯೆಹೋಶುವ 11:23). ಈ ಪದವು ಯೆಹೋಶುವ ಮತ್ತು ನ್ಯಾಯಸ್ಥಾಪಕರು ಪುಸ್ತಕದಲ್ಲಿ ಸಮಾಧಾನ (ನೆಮ್ಮದಿ)ಯನ್ನು ಸೂಚಿಸಲು ಬಹಳ ಸಲ ಕಾಣಿಸಿಕೊಳ್ಳುತ್ತದೆ. 'ರಾಗ' ಎಂಬ ಕ್ರಿಯಾ ಪದವೂ ಸಹ ವಿಶ್ರಾಂತಿಯನ್ನು ಸೂಚಿಸಲು ಉಪಯೋಗವಾಗಿದೆ. ಇಸ್ರಾಯೇಲ್ಯರು ತಮ್ಮ ಅವಿಧೇಯತೆಯ ನಿಮಿತ್ತ ಗಡಿಪಾರಾದಾಗ ಆ ದೇಶದಲ್ಲಿ ಅವರಿಗೆ ವಿಶ್ರಾಂತಿ ದೊರಕುವುದಿಲ್ಲ ಎಂದು ದೇವರು ಎಚ್ಚರಿಕೆ ಕೊಡುವ ವಚನದಲ್ಲಿ (ಧ.ಕಾಂಡ 28:65). ಈ ಪದವು ಬಳಕೆಯಾಗಿದೆ. ಯೆರೆಮೀಯ 50:34ರಲ್ಲಿ ಈ ಪದವು ಕರ್ತೃಪದವಾಗಿ ಕಾಣಿಸಿಕೊಂಡಿದೆ. ವಿಶ್ರಾಂತಿ ತೆಗೆದುಕೊಳ್ಳಲಾಗದ ಸಂದರ್ಭವನ್ನು ಇದು ವಿವರಿಸುತ್ತದೆ.

ಧರ್ಮೋಪದೇಶಕಾಂಡ 31:16 ಮತ್ತು 2 ಸಮುವೇಲ 7:12ನ್ನು ಓದಿರಿ. ಇಲ್ಲಿ ಯಾವ ತೆರನಾದ ವಿಶ್ರಾಂತಿಯ ಬಗ್ಗೆ ಮಾತಾಡುತ್ತದೆ?

ಈ ಎರಡೂ ವಚನಗಳು 'ಶಕಾಬ್' ಕ್ರಿಯಾಪದದ ನುಡಿಗಟ್ಟನ್ನು ಬಳಸಿವೆ. ಇದು ಅಕ್ಷರಶಃ ಮಲಗಿಕೊ ನಿದ್ರೆ ಮಾಡು ಎಂಬ ಅರ್ಥವನ್ನು ಕೊಡುತ್ತದೆ. ದೇವರು ದಾವೀದನ ಜೊತೆ ಮಾಡಿಕೊಳ್ಳುವ ಒಡಂಬಡಿಕೆಯಲ್ಲಿ ಮುಂದಿನ ರಾಜನ ವಾಗ್ದಾನ ಮಾಡುತ್ತಾ 'ನಿನ್ನ (ದಿನಗಳು) ಆಯುಷ್ಕಾಲವು ಮುಗಿದು ನೀನು ಪಿತೃಗಳ ಬಳಿಗೆ ಸೇರಿ ವಿಶ್ರಾಂತಿ ಹೊಂದಿದ ಮೇಲೆ ನಿನ್ನಿಂದ ಹುಟ್ಟುವವನನ್ನು ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರಪಡಿಸುವೆನು" ಎಂಬ ವಾಕ್ಯದಲ್ಲಿ 'ಶಕಾಬ್' ಪದವು ಉಪಯೋಗಿಸಲ್ಪಟ್ಟಿದೆ (2 ಸಮು 7:12).

ವಿಶ್ರಾಂತಿಯನ್ನು ಸೂಚಿಸುವ ಇಬ್ರಿಯ ಭಾಷೆಯ ವಿವಿಧ ಕ್ರಿಯಾಪದಗಳ ದೊಡ್ಡ ಪಟ್ಟಿಯು ದೈವಶಾಸ್ತ್ರದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು

ವಿಶ್ರಾಂತಿಯು ಕೇವಲ ಒಂದೆರಡು ಪದಗಳಿಗೆ ಸಂಬಂಧಪಡುವುದಿಲ್ಲ. ನಾವು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ವಿರಮಿಸಿಕೊಳ್ಳುತ್ತೇವೆ. ವಿಶ್ರಾಂತಿಯು ಕೇವಲ ಸಬ್ಬತ್ತಿಗೆ ಮಾತ್ರ ಸಂಬಂಧಪಡದೆ ಶಾರೀರಿಕವಾಗಿ, ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಪರಿಣಾಮ ಬೀರುತ್ತದೆ.

ಮರಣವು ನಿಶ್ಚಯವಾಗಿಯೂ ನಮ್ಮ ವೈರಿಯಾಗಿದ್ದು ಮುಂದೆ ಒಂದು ದಿನ ರದ್ದಾಗುತ್ತದೆ. ನಮ್ಮವರು ಸತ್ತು ನಮ್ಮನ್ನು ಅಗಲಿದಾಗ ನಾವು ಎಷ್ಟೇ ದುಃಖಿಸಿದರೂ ಕನಿಷ್ಠ ಈವಾಗ ಅವರು ವಿಶ್ರಾಂತಿಯಲ್ಲಿದ್ದಾರೆ ಎಂದು ತಿಳಿದುಕೊಳ್ಳುವುದು ನಮಗೆ ಆದರಣೆಯನ್ನು ನೀಡುತ್ತದೆ ಏಕೆ?

**ಬುಧವಾರ** **ಜೂನ್ 30**

## ಹೊಸ ಒಡಂಬಡಿಕೆಯಲ್ಲಿ ವಿಶ್ರಾಂತಿ

ಹೊಸ ಒಡಂಬಡಿಕೆಯಲ್ಲಿ 'ಅನಪಾವೊ' ಎಂಬ ಕ್ರಿಯಾಪದದ ರೂಪವು ವಿಶ್ರಾಂತಿ ಹೊಂದು, ವಿರಮಿಸು, ಉಪಶಮನ ಹೊಂದು ಎಂಬ ಅರ್ಥದಲ್ಲಿ ಉಪಯೋಗವಾಗಿರುವುದನ್ನು ಬಹಳ ಸಲ ಕಾಣುತ್ತೇವೆ. ಯೇಸುಕ್ರಿಸ್ತನ ಬಹಳ ಪ್ರಖ್ಯಾತವಾದ ವಿಶ್ರಾಂತಿಯ ಹೇಳಿಕೆ ಮತ್ತಾಯ 11:28ರಲ್ಲಿ ಎಲ್ಲೈ ಕಷ್ಟ ಪಡುವವರೇ ಹೊರೆಹೊತ್ತವರೇ ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು ಎಂಬ ವಚನದಲ್ಲಿ ಉಪಯೋಗವಾಗಿದೆ. ಇದು ಶಾರೀರಿಕ ವಿಶ್ರಾಂತಿಯನ್ನು ಕುರಿತು ಹೇಳುತ್ತದೆ (ಮತ್ತಾಯ 26:45). ಕೊರಿಂಥದವರಿಗೆ ಸಲ್ಲಿಸುವ ಅಂತಿಮ ವಂದನೆಯಲ್ಲಿ ಪೌಲನು ತನ್ನ ಸ್ನೇಹಿತರು ಬಂದು ಅವನನ್ನು ಸೇರಿಕೊಂಡಾಗ ಸಂತೋಷಪಡುತ್ತಾ ತನ್ನ ಆತ್ಮಕ್ಕೆ ಇದರಿಂದ 'ಉಪಶಮನ' ದೊರೆಯಿತು ಎಂದು ಹೇಳುವಾಗ ಈ ಪದವು ಬಳಕೆಯಾಗಿದೆ (1 ಕೊರಿಂಥ 16:18).

ವಿಶ್ರಾಂತಿಯನ್ನು ಸೂಚಿಸುವ ಹೇಸಿಚಾಝೋ ಎಂಬ ಮತ್ತೊಂದು ಕ್ರಿಯಾಪದವು ಉಪಯೋಗಿಸಲ್ಪಟ್ಟಿದೆ. ಯೇಸುಕ್ರಿಸ್ತನು ಸಮಾಧಿಯಲ್ಲಿ ವಿಶ್ರಾಂತಿ ಹೊಂದಿದಂತೆ ಆತನ ಶಿಷ್ಯರು ಹೊಂದಿದ ಸಬ್ಬತ್ತಿನ ವಿಶ್ರಾಂತಿಯನ್ನು ವಿವರಿಸುತ್ತದೆ (ಲೂಕ 23:56). ಆದರೆ ಇದು ಆರಾಮವಾಗಿ ಜೀವಿಸುವುದನ್ನು ವರ್ಣಿಸುತ್ತದೆ (1 ಥೆಸಲೋನಿಕ 4:11) ಮತ್ತು ಈ ಪದವು ಒಬ್ಬನು ಆಕ್ಷೇಪಣೆ ಮಾಡದಿರುವಾಗ ಸಿಗುವ ಪ್ರಶಾಂತ ಜೀವನವನ್ನು ಸಹಾ ಸೂಚಿಸುತ್ತದೆ.

ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು ಎಂಬುದನ್ನು ಇಬ್ರಿಯ 4:4 ವಚನವು ವಿವರಿಸುವಾಗ 'ಕಟಪಾವೊ' ಎಂಬ ಗ್ರೀಕ್ ಕ್ರಿಯಾಪದವನ್ನು ಉಪಯೋಗಿಸಲಾಗಿದೆ. ಹಾಗೆಂದರೆ 'ನಿಲ್ಲಿಸುವಂತೆ ಮಾಡು', 'ವಿಶ್ರಾಂತಿತರು' ವಿಶ್ರಾಂತಿ ಎಂಬ ಪದಗಳು ಇಬ್ರಿಯ ಹಳೆ ಒಡಂಬಡಿಕೆಯ ಗ್ರೀಕ್ ಆವೃತ್ತಿಯಲ್ಲಿ ಈ ಪದವು ಬಳಕೆಯಾಗಿದೆ. ಹೊಸ ಒಡಂಬಡಿಕೆಯ ಇಬ್ರಿಯರಿಗೆ ಬರೆದ ಪತ್ರಿಕೆಯ 4ನೇ ಅಧ್ಯಾಯದಲ್ಲಿ ಈ ಕ್ರಿಯಾಪದವು ಹೆಚ್ಚಾಗಿ ಉಪಯೋಗಿಸಲ್ಪಟ್ಟಿದೆ.

ಮಾರ್ಕ 6:30–32 ವಚನಗಳನ್ನು ಓದಿರಿ. ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ ಸಾಕಷ್ಟು ಸುವಾರ್ತೆಯ ಸೇವೆಗೆ ಅವಕಾಶಗಳಿರುವಾಗ "ನೀವು ವಿಂಗಡವಾಗಿ ಬಂದು ದಣಿವಾರಿಸಿಕೊಳ್ಳಿರಿ" ಎಂದು ಯಾಕೆ ಹೇಳಿದನು? ಮಾರ್ಕ 6ರಲ್ಲಿರುವ ವಿಶಾಲಾರ್ಥವನ್ನು ಗಮನಿಸಿರಿ.

ನೀವು ಮಾತ್ರ ವಿಗಂಡವಾಗಿ ಅಡವಿಗೆ ಬಂದು ಸ್ವಲ್ಪ ದಣಿವಾರಿಸಿಕೊಳ್ಳಿರಿ (ಮಾರ್ಕ 6:3) ಎಂಬ ವಾಕ್ಯವು ಆಮಂತ್ರಣವಾಗಿ ಉಪಯೋಗವಾಗಿಲ್ಲ. ಇದು ಮಾಡಲೇಬೇಕಾದ ಕರ್ತವ್ಯರೂಪದಲ್ಲಿ ಉಪಯೋಗವಾಗಿದೆ. ಅಂದರೆ ಆದೇಶ ಅಥವಾ ಆಜ್ಞೆಯಾಗಿ ಉಪಯೋಗಿಸಲ್ಪಟ್ಟಿದೆ. ಯೇಸುಕ್ರಿಸ್ತನು ತನ್ನ ಶಿಷ್ಯರ ಶಾರೀರಿಕ ಮತ್ತು ಭಾವನಾತ್ಮಕ ಸ್ವಸ್ಥತೆಯ ಬಗ್ಗೆ ಕಾಳಜಿಯುಳ್ಳವನಾಗಿದ್ದನು. ಯೇಸುಕ್ರಿಸ್ತನು ತನ್ನ ಶಿಷ್ಯರನ್ನು ಸುವಾರ್ತೆಯ ಸೇವೆಗೆ ಇಬ್ಬಿಬ್ಬರನ್ನು ಜೊತೆಯಾಗಿ ಕಳುಹಿಸಿದ್ದನು. ಅವರು ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಆವಾಗ ತಾನೇ ಹಿಂದಿರುಗಿ ಬಂದಿದ್ದರು (ಮಾರ್ಕ 6:7). ಅವರು ಸಡಗರದಲ್ಲಿ ಹಿಂದಿರುಗಿ ಬಂದದ್ದನ್ನು ಮಾರ್ಕ 6:30 ವಿವರಿಸುತ್ತದೆ. ಅವರ ಹೃದಯಗಳು ತುಂಬಿ ಬಂದಿದ್ದವು. ಅವರು ತಮ್ಮ ಸಫಲತೆ ಮತ್ತು ವಿಫಲತೆಗಳನ್ನು ಯೇಸುಕ್ರಿಸ್ತನ ಜೊತೆ ಹಂಚಿಕೊಳ್ಳಬಯಸಿದ್ದರು. ಆದರೆ ಯೇಸುಕ್ರಿಸ್ತನು ಅವರು ಅದೆಲ್ಲವನ್ನು ನಿಲ್ಲಿಸಿ ವಿಶ್ರಾಂತಿ ಹೊಂದಿಕೊಳ್ಳಲು ಕರೆದನು.

ಯಾಕೆಂದರೆ ಬಹಳ ಮಂದಿ ಬರುತ್ತಾ ಹೋಗುತ್ತಾ ಇದ್ದುದರಿಂದ ಅವರಿಗೆ ಊಟ ಮಾಡುವುದಕ್ಕೂ ಅವಕಾಶ ಸಿಕ್ಕಲಿಲ್ಲವೆಂದು ಮಾರ್ಕನು ವಿವರಣಾತ್ಮಕವಾಗಿ ಹೇಳಿದ್ದಾನೆ (ಮಾರ್ಕ 6:31). ದೇವರು ಸುವಾರ್ತೆ ಸೇವೆಯ ವ್ಯವಹಾರದಲ್ಲಿ

ತುಂಬಾ ನಿರತರಾಗಿದ್ದು ಭಾವವಾವೇಶದಲ್ಲಿ ಮುಳುಗಿ ಹೋಗುವುದು ಶಿಷ್ಯರಿಗೆ ನಿಜವಾಗಿಯೂ ಒಂದು ಸವಾಲಾಗಿತ್ತು. ನಾವು ನಮ್ಮ ಆರೋಗ್ಯವನ್ನು ಕಾಯ್ದುಕೊಂಡು ಭಾವನಾತ್ಮಕವಾಗಿ ಸ್ವಸ್ಥತೆ ಹೊಂದಿರಬೇಕೆಂದು ಅದಕ್ಕಾಗಿ ವಿಶ್ರಾಂತಿ ಹೊಂದುವ ಕಾಲಗಳನ್ನು ಸರಿಯಾದ ರೀತಿಯಲ್ಲಿ ಯೋಜಿಸಿಕೊಳ್ಳಬೇಕೆಂದು ಯೇಸುಕ್ರಿಸ್ತನು ನಮಗೆ ಜ್ಞಾಪಕ ಪಡಿಸುತ್ತಾನೆ.

ನಿಮ್ಮ ಸ್ಥಳೀಯ ಸಭೆಯ ಪಾಲಕರು ಅಥವಾ ಹಿರಿಯರು ಅಥವಾ ನಿಮಗೆ ತಿಳಿದಿರುವ ಯಾರಾದರೊಬ್ಬರೂ ದೇವರ ಸೇವೆಯಲ್ಲಿ ತುಂಬಾ ಪರಿಶ್ರಮ ಪಡುತ್ತಿರುವಾಗ ಅವರಿಗೆ ಉಪಶಮನ ಸಿಗುವ ಹಾಗೆ ಸಹಾಯ ಮಾಡುವ ವಿಧಾನಗಳು ಯಾವುವು? ಅವರು ವಿಶ್ರಾಂತಿ ಕಂಡುಕೊಳ್ಳುವ ಹಾಗೆ ನೀವು ನಿಮ್ಮ ಪ್ರಶಂಸೆಯನ್ನು ಮತ್ತು ಸಹಾಯವನ್ನು ವ್ಯಕ್ತಪಡಿಸಲು ಏನು ಮಾಡಬಲ್ಲಿರಿ?

**ಗುರುವಾರ** **ಜುಲೈ 1**

## ಒಬ್ಬ ಅವಿಶ್ರಾಂತ ಅಲೆಮಾರಿ

ಆದಿಕಾಂದ 4:1–12ನ್ನು ಓದಿರಿ. ಕಾಯನು ಭೂಮಿಯ ಮೇಲೆ ಒಬ್ಬ ವಿಶ್ರಾಂತಿಯಿಲ್ಲದೆ ಅಲೆಯುವವನನ್ನಾಗಿ ಮಾಡಿದುದು ಯಾವುದು? (ಆದಿಕಾಂಡ 4:12)?

ಸತ್ಯವೇದದ ವಚನಗಳು ದೇವರು ಯಾಕೆ ಹೇಬೆಲನ ಕಾಣಿಕೆಯನ್ನು ಮೆಚ್ಚಿದನು ಮತ್ತು ಕಾಯಿನನು ಅರ್ಪಿಸಿದ ಕಾಣಿಕೆಯನ್ನು ಮೆಚ್ಚಲಿಲ್ಲವೆಂಬುದನ್ನು ವಿಶದವಾಗಿ ತಿಳಿಸುವುದಿಲ್ಲ (ಆ.ಕಾಂಡ 4:4,5). ಆದರೆ ನಮಗೆ ಕಾರಣವು ಗೊತ್ತಾಗುತ್ತದೆ. "ಕಾಯಿನನು ತನ್ನ ರಕ್ಷಣೆಗೆ ದೇವರು ವಾಗ್ದಾನ ಮಾಡಿರುವ ರಕ್ತಧಾರೆಯ ಏರ್ಪಾಟನ್ನು (ಯಜ್ಞವನ್ನು) ಸಮರ್ಪಿಸಲು ನಂಬಿಕೆಯನ್ನು ತನ್ನ ಹೃದಯದಲ್ಲಿ ಇಟ್ಟುಕೊಂಡಿರಲಿಲ್ಲ ಮತ್ತು ಆತನು ದೇವರ ವಿರುದ್ಧವಾಗಿ ಈ ವಿಷಯದಲ್ಲಿ ಗುಣಗುಟ್ಟುವನಾಗಿದ್ದನು. ಆತನು ಸಮರ್ಪಿಸಿದ ಕಾಣಿಕೆಯು ಅವನ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಸೂಚಿಸುತ್ತಿರಲಿಲ್ಲ.

ಇಂದು ಜನರು ತಾವು ದೇವರು ಹೇಳಿದಂತೆಯೇ ಕೇಳುವುದು ತಮ್ಮ ಬಲಹೀನತೆಯಾಗುತ್ತದೆ ಎಂದುಕೊಳ್ಳುವಂತೆಯೇ ಅಂದು ಕಾಯಿನನು ವಾಗ್ದಾನದ ಯಜ್ಞವಾದ ಯೇಸುಕ್ರಿಸ್ತನ ದೋಷಪರಿಹಾರ (ರಕ್ಷಣೆಯನ್ನು) ನಂಬದೆ ಹೋದನು.

ಆತನು ತನ್ನ ಸ್ವಂತ ನೀತಿಯ ಮೇಲೆ ಆತುಕೊಂಡನು. ಆತನು ತನ್ನ ಅರ್ಹತೆಗಳನ್ನು ಮುಂದಿಟ್ಟುಕೊಂಡನು– ಎಲೆನ್ ಜಿ ವೈಟಮ್ಮನವರ "ನಮ್ಮ ಪಿತೃಗಳು ಮತ್ತು ಪ್ರವಾದಿಗಳು" ಪುಸ್ತಕದಲ್ಲಿ 72ನೇ ಪುಟ.

ದೇವರು ಕಾಯಿನನನ್ನು ಕುರಿತು ಭೂಮಿಯ ಮೇಲೆ ಆತನು ಅವಿಶ್ರಾಂತಿ ಅಲೆಮಾರಿಯಾಗಿರುತ್ತಾನೆಂದು ಹೇಳುವಾಗ ದೇವರು ಆತನನ್ನು ಹಾಗೆ ಮಾಡಲಿಲ್ಲ. ಆದರೆ ಕಾಯಿನನ ಪಾಪಕೃತ್ಯಗಳು ಮತ್ತು ಅವಿಧೇಯತೆಯ ಫಲದಿಂದ ಅವನ ಜೀವನವು ಅಲೆಮಾರಿಯ ಜೀವನವಾಯ್ತು. ಕಾಯ್ನನು ದೇವರಲ್ಲಿ ವಿಶ್ರಾಂತಿಯನ್ನು ಕಂಡುಕೊಳ್ಳಲಾರದೆ ಹೋದನು. ಹಾಗಾಗಿ ಅವನು ಯಾವ ರೀತಿಯಲ್ಲೂ ವಿಶ್ರಾಂತಿಯನ್ನು ಪಡೆದುಕೊಳ್ಳಲಾರದೆ ಹೋದನು.

ಇಬ್ರಿಯ ಭಾಷೆಯಲ್ಲಿ ಮೆಚ್ಚಿದನು ಎಂಬುದನ್ನು (ಆ.ಕಾಂಡ 4:4) 'ಹತ್ತಿರದಲ್ಲಿ ಪರಿಶೀಲಿಸಿದನು', 'ಎಚ್ಚರಿಕೆಯಿಂದ ಪರಿಗಣಿಸಿದನು' ಎಂತಲೂ ಅನುವಾದಿಸಬಹುದಾಗಿದೆ. ದೇವರು ಎಚ್ಚರಿಕೆಯಿಂದಲೂ ಹತ್ತಿರದಿಂದಲೂ ಆತನು ಸಮರ್ಪಿಸಿದ ಕಾಣಿಕೆಯನ್ನು ನೋಡಲಿಲ್ಲ, ಆದರೆ ಅದನ್ನು ಸಮರ್ಪಿಸುವಾಗ ಅವನು ತೋರಿಸಿದ ನಡವಳಿಕೆಯನ್ನು (ಮನೋಧೋರಣೆ) ಗಮನಿಸಿದನು. ದೇವರು ಕಾಯಿನನು ಸಮರ್ಪಿಸಿದ ಕಾಣಿಕೆಯನ್ನು ತನ್ನ ಮನಸ್ಸಿಗೆ ತೋರಿದಂತೆ ನಿರಂಕುಶ ಭಾವದಿಂದ ಅದನ್ನು ತಿರಸ್ಕರಿಸಲಿಲ್ಲ. ಆದರೆ ದೇವರು ಕಾಯಿನನ ಗುಣಸ್ವಭಾವಗಳನ್ನು ಉದ್ದೇಶಗಳನ್ನು ಎಚ್ಚರಿಕೆಯಿಂದ ಅಳೆಯುವ ಪ್ರಕ್ರಿಯೆಯಾಗಿತ್ತು. ಇದು ವಿಚಾರಣ ಯುಕ್ತವಾದ ನ್ಯಾಯತೀರ್ಪಿಗೆ ಉತ್ತಮವಾದ ಉದಾಹರಣೆಯಾಗಿದೆ. ಆದಿಕಾಂಡ 4:13–17 ವಚನಗಳನ್ನು ಓದಿರಿ. ದೇವರ ನ್ಯಾಯತೀರ್ಪಿಗೆ ಕಾಯಿನನ ಪ್ರತಿಕ್ರಿಯೆ ಏನಾಗಿತ್ತು ವಿವರಿಸಿರಿ.

ನಾವು ದೇವರ ಪ್ರಸನ್ನತೆಯಿಂದ ಓಡಿಹೋಗುವ ಪ್ರಯತ್ನ ಮಾಡಿದಾಗ ನಾವು ನಮ್ಮ ಮನಶ್ಶಾಂತಿಯನ್ನು ಕಳೆದುಕೊಂಡುಬಿಡುತ್ತೇವೆ. ನಾವು ದೈವೀಕಕೃಪೆಗಾಗಿ ಹಂಬಲಿಸುವವರಾಗಿರದೆ ಅದಕ್ಕೆ ಬದಲಾಗಿ ಮಾನವೀಯ ಸಂಬಂಧಗಳನ್ನು ಅಥವಾ ಮಿತಿಮೀರಿದ ಒತ್ತಡದ ಜೀವನವನ್ನು ಮಾಡಲು ಪ್ರಯತ್ನಿಸುತ್ತೇವೆ. ಕಾಯಿನನು ಒಂದು ಪಟ್ಟಣವನ್ನು ಕಟ್ಟತೊಡಗುತ್ತಾನೆ. ಅಲ್ಲಿ ತನ್ನ ಸಂತತಿಯನ್ನು ಬೆಳೆಸತೊಡಗುತ್ತಾನೆ. ಈ ಎರಡೂ ಕೆಲಸಗಳು ದೊಡ್ಡಸಾಧನೆಗಳಾಗಿವೆ. ಇವು

ಆತನ ದೃಢಸಂಕಲ್ಪವನ್ನೂ ಶಕ್ತಿಯನ್ನೂ ಕುರಿತು ಹೇಳುತ್ತವೆ. ಆದರೆ ಅವನು ದೇವರಿಗೆ ವಿರುದ್ಧವಾಗಿ ತಿರುಗಿಬಿದ್ದು ಆ ಪಟ್ಟಣವನ್ನು ಕಟ್ಟಿದ್ದುದರಿಂದ ದೇವ ರಹಿತವಾಗಿದ್ದ ಅವನ ಸಾಮ್ರಾಜ್ಯ ಅಂತಿಮವಾಗಿ ಏನೂ ಅಲ್ಲವಾಯ್ತು.

ನಾವು ಮಾಡಿದ ಪಾಪಗಳ ಪರಿಣಾಮದಿಂದ ಬಂದ ಕಷ್ಟಸಂಕಟಗಳನ್ನು ನಾವು ಅನುಭವಿಸಿ ತೀರಿದಬಳಿಕ ನಮ್ಮ ಪಾಪಗಳಿಗೆ ಶಿಲುಬೆಯಿಂದ ಬಂದ ಕ್ಷಮಾಪಣೆಯನ್ನು ಒಪ್ಪಿಕೊಳ್ಳಲು ಹೇಗೆ ಕಲಿಯುತ್ತೇವೆ?

**ಶುಕ್ರವಾರ** **ಜುಲೈ 3**

**ಹೆಚ್ಚಿನ ಚಿಂತನೆಗಾಗಿ :** ರಬ್ಬಿಯರ ಅಭಿಪ್ರಾಯದಲ್ಲಿ ಧಾರ್ಮಿಕತೆಯು ಯಾವಾಗಲೂ ಚಟುವಟಿಕೆಗಳಿಂದ ತುಂಬಿರಬೇಕಾಗಿತ್ತು. ತಮ್ಮ ಧರ್ಮ ಶ್ರದ್ಧೆಯ ಹೆಚ್ಚುಗಾರಿಕೆಯನ್ನು ಪ್ರದರ್ಶಿಸಲು ಬಹಿರಾಚಾರಗಳ ಮೇಲೆ ಅವಲಂಬಿತರಾಗುತ್ತಿದ್ದರು. ಹಾಗಾಗಿ ಅವರು ತಮ್ಮ ಆತ್ಮಗಳನ್ನು ದೇವರಿಂದ ಪ್ರತ್ಯೇಕಗೊಳಿಸಿಕೊಂಡು ತಮ್ಮ ಸ್ವಂತಿಕೆಯ ಮೇಲೆ ಆಧಾರಗೊಳ್ಳುತ್ತಿದ್ದರು. ಅದೇ ಅಪಾಯವು ಈಗಲೂ ಸಹಾ ನಮ್ಮ ಮಧ್ಯದಲ್ಲಿದೆ. ಮಾಡುವ ಚಟುವಟಿಕೆಗಳು ಹೆಚ್ಚುತ್ತಾ ಹೋದಾಗ ಮನುಷ್ಯರು ದೇವರ ಯಾವ ಕೆಲಸವನ್ನೂ ಮಾಡಿ ಯಶಸ್ಸುಗಳಿಸುತ್ತಾರೆ. ಆದರೆ ಮನುಷ್ಯರ ಯೋಜನೆಗಳನ್ನು ವಿಧಾನಗಳನ್ನು ನೆಚ್ಚುವುದು ಯಾವಾಗಲೂ ಅಪಾಯಕರ-ವಾಗಿರುತ್ತದೆ.

ಕಡಿಮೆಯಾಗಿ ಪ್ರಾರ್ಥಿಸುವಾಗ ಕಡಿಮೆಯಾಗಿ ನಂಬುವ ಪ್ರವೃತ್ತಿಯು ಬೆಳೆದುಕೊಳ್ಳುತ್ತದೆ. ಶಿಷ್ಯರಂತೆಯೇ ನಾವೂ ಸಹಾ ದೇವರ ಮೇಲೆ ಅವಲಂಬಿತರಾಗದೆ ನಮ್ಮ ದೃಷ್ಟಿಯನ್ನು (ಗುರಿಯನ್ನು) ಕಳೆದುಕೊಂಡು ನಮ್ಮ ಚಟುವಟಿಕೆಗಳನ್ನೇ ದೇವರು ಕಾಪಾಡಬೇಕೆಂದು ಬಯಸುವವರಾಗುತ್ತೇವೆ. ನಾವು ಯಾವಾಗಲೂ ಯೇಸುಕ್ರಿಸ್ತನ ಶಕ್ತಿಯು ಎಲ್ಲವೂ ಕಾರ್ಯಗಳನ್ನು ನಡೆಸುತ್ತದೆ ಎಂಬುದನ್ನು ಅರಿತು ಆತನನ್ನೇ ನಾವು ಸ್ಥಿರವಾಗಿ ದೃಷ್ಟಿಸಬೇಕು. ನಾವು ಶ್ರದ್ಧಾಪೂರ್ವಕವಾಗಿ ಧ್ಯಾನಕ್ಕಾಗಿಯೂ ಪ್ರಾರ್ಥನೆಗಾಗಿಯೂ ಆತನ ವಾಕ್ಯಗಳನ್ನು ಅಧ್ಯಯನ ಮಾಡುವುದಕ್ಕಾಗಿಯೂ ಸಮಯವನ್ನು ತೆಗೆದುಕೊಳ್ಳಬೇಕು. ಯೇಸುಕ್ರಿಸ್ತನ ಅರ್ಹತೆಯ ಮೇಲೆ ನಾವು ಪ್ರಾರ್ಥನಾಪೂರ್ವಕವಾಗಿ ಸಾಧಿಸಿದ ಕೆಲಸಗಳು ಮಾತ್ರ ಪಾವನವಾಗಿರುತ್ತವೆ. ಇವು ಕಡೆಯದಾಗಿ ಒಳ್ಳೆಯದನ್ನು ಸಮರ್ಥವಾಗಿ ಸಾಬೀತು

ಪಡಿಸುವಂಥವಾಗಿರುತ್ತವೆ" – ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್ ಪುಟ 362.

## ಚರ್ಚಿಸಬೇಕಾದ ಪ್ರಶ್ನೆಗಳು

1. ಒಂದರ ಮೇಲೊಂದು ಒತ್ತಡಗಳು ಯಾವಾಗಲೂ ಲಭಿಸುತ್ತಾ ಹೋಗಿ (ದೈಹಿಕವಾಗಿ ಅಥವಾ ವಾಸ್ತವಿಕವಾಗಿ) ವಾಸ್ತವವಲ್ಲದ ಅಥವಾ ದೇವರಿಂದಲೂ ನೇಮಿಸಲ್ಪಡದ ಆದರ್ಶಗಳನ್ನು ಜೀವಿಸಲು ಪ್ರಯತ್ನ ಪಡುವಾಗ ಜನರು ಭಾವನಾತ್ಮಕವಾಗಿ, ದೈಹಿಕವಾಗಿ ಮತ್ತು ಆಧ್ಯಾತ್ಮವಾಗಿ ಅಸ್ವಸ್ಥತೆಗೊಳ್ಳುತ್ತಾರೆ. ಅಂತಹ ಆಯಾಸಗೊಂಡ ಜನಗಳಿಗೆ ವಿಶ್ರಾಂತಿ ಬಯಸುವವರಿಗೆ ನಿಮ್ಮ ಸಭೆಯು ಹೇಗೆ ಸ್ವಾಗತ ಬಯಸುವ ಸ್ಥಳವಾಗಿರುತ್ತದೆ?

2. ದೇವರಿಗಾಗಿ ಒಳ್ಳೆಯ ಕೆಲಸಗಳನ್ನು ಮಾಡುವಾಗಲೂ ನಾವು ತುಂಬಾ ಶ್ರಮಿಕರಾಗಿರಲು ಸಾಧ್ಯವೆ? ಯೇಸುಕ್ರಿಸ್ತನ ಮತ್ತು ಆತನ ಶಿಷ್ಯರ ಕಥೆಯನ್ನು ಆಲೋಚಿಸಿರಿ (ಮಾರ್ಕ 6:30–32). ಅದರ ಆಚರಣೆಯನ್ನು ನಿಮ್ಮ ಸಬ್ಬತ್ತಿನ ಶಾಲೆಯಲ್ಲಿ ಚರ್ಚಿಸಿರಿ.

3. ಕ್ರಿ.ಶ. 1899ನೇ ಇಸವಿಯಲ್ಲಿ ಒಬ್ಬ ವ್ಯಕ್ತಿಯು ತನ್ನ ಕಾರನ್ನು ಗಂಟೆಗೆ 39.24 ಮೈಲುಗಳ ವೇಗದಲ್ಲಿ ಚಾಲನೆ ಮಾಡಿದಾಗ ವೇಗ ಅಳೆಯುವ ಉಪಕರಣವು ಮುರಿದುಹೋಯ್ತು. ಆ ವಿಷಯವನ್ನು ಹೇಳುವುದಕ್ಕೆ ಆತನು ಬದುಕುಳಿದಿದ್ದನು. ಇಂದು ಖಂಡಿತವಾಗಿಯೂ ಕಾರುಗಳು ಅಂದಿಗಿಂತ ಬಹಳ ವೇಗವಾಗಿ ಚಲಿಸುತ್ತವೆ. ಈವಾಗ ನಾವು ಮಾತಾಡುವ ಮೊಬೈಲ್ ಫೋನ್‌ಗಳ Processor ಹಳೆ ಕಾಲದ ಗಣಕಯಂತ್ರಗಳಿಗಿಂತ ಬಹಳ ವೇಗವಾಗಿ ಕೆಲಸ ಮಾಡುತ್ತವೆ. ಇಂದು ವಾಯುಸಂಚಾರ ಹಿಂದಿನ ಕಾಲಕ್ಕಿಂತ ಹೆಚ್ಚು ತ್ವರಿತವಾಗಿದೆ (ವೇಗವಾಗಿದೆ) ಮತ್ತು ಹೆಚ್ಚು ತ್ವರಿತವಾಗುತ್ತಲೇ ಇದೆ. ಮುಖ್ಯವಾದ ವಿಷಯವೇನೆಂದರೆ ನಾವು ಇಂದು ಮಾಡುವ ಎಲ್ಲಾ ಕೆಲಸಗಳನ್ನು ಹಿಂದಿನ ಕಾಲಕ್ಕಿಂತ ವೇಗವಾಗಿ ಮಾಡುತ್ತೇವೆ, ಆದರೂ ಇನ್ನೇನಾಗಬೇಕಾಗಿದೆ? ನಾವು ಇನ್ನೂ ವಿಶ್ರಾಂತಿ ಹೊಂದದೆ ತರಾತುರಿಯಲ್ಲೇ ಇರುತ್ತೇವೆ. ಇದು ಮನುಷ್ಯನ ಮೂಲ ಸ್ವಭಾವದ ಬಗ್ಗೆ ಏನು ಹೇಳುತ್ತದೆ

ಮತ್ತು ದೇವರು ತನ್ನ ಆಜ್ಞೆಯೊಂದರಲ್ಲಿ ವಿಶ್ರಾಂತಿಯನ್ನು ಯಾಕೆ ಬಹಳ ಮುಖ್ಯವಾಗಿ ಮಾಡಿದ್ದಾನೆ?

4. ಮನುಷ್ಯನು ಏದೇನ್ ತೋಟದಲ್ಲಿ ಪಾಪದಲ್ಲಿ ಬೀಳುವುದಕ್ಕಿಂತ ಮೊದಲು ಸಬ್ಬತ್ತಿನ ವಿಶ್ರಾಂತಿಯನ್ನು ದೇವರು ಪ್ರತಿಷ್ಠಾಪಿಸಿದ್ದರ ಬಗ್ಗೆ ಚೆನ್ನಾಗಿ ಆಲೋಚಿಸಿರಿ. ಸ್ವಾರಸ್ಯಕರವಾದ ಧಾರ್ಮಿಕತೆಯನ್ನು ಸೂಚಿಸುವ ಈ ಸತ್ಯದ ಜೊತೆಗೆ ಇದು ಪರಿಪೂರ್ಣವಾದ ಪಾಪರಹಿತವಾದ ಪ್ರಪಂಚದಲ್ಲೂ ವಿಶ್ರಾಂತಿ ನಮಗೆ ಹೇಗೆ ಬೇಕಾಗುತ್ತದೆ ಎಂಬುದರ ಬಗ್ಗೆ ಇದು ಏನನ್ನು ಹೇಳುತ್ತದೆ?